# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸನಗರ

## ಸಿ.ಸಿ. ನಂ. 706/2020

**ಚಾಸಾ-3 ಪ್ರಾಸಾ-2**

| | | |
|---|---|---|
| ಹೆಸರು | – | ಸಂತೋಷ |
| ತಂದೆಯ ಹೆಸರು | – | ನಾರಾಯಣ |
| ವಯಸ್ಸು | – | 44 ವರ್ಷ |
| ವೃತ್ತಿ | – | ವ್ಯವಸಾಯ |
| ವಾಸಸ್ಥಳ | – | ಮಸಗಲ್ಲಿ ಗ್ರಾಮ. |

(ದಿನಾಂಕಃ **05.06.2026** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ**

1. ದಿನಾಂಕಃ 27.05.2020 ರಂದು ಸಂಜೆ ಸುಮಾರು 7 ಗಂಟೆಗೆ ನನ್ನ ಮೊಬೈಲ್ ಗೆ ಚಾಸ 1 ರವರು ಕರೆ ಮಾಡಿ ಆಸ್ಪತ್ರೆಯಲ್ಲಿ ಇರುತ್ತೇನೆ ಬನ್ನಿ ಎಂದು ಕರೆದಿರುತ್ತಾರೆ. ನಾನು ಹೊಸನಗರದ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ಚಾಸ 1 ರವರಿಗೆ ಕೈಗೆ ಬ್ರಿಫ್ ಹಾಕಿರುತ್ತಾರೆ. ಆಗ ಅಲ್ಲಿ ಪೊಲಿಸರು ಬಂದಿರುತ್ತಾರೆ.

2. ನನಗೆ ಚಾಸ 1 ರವರು ದೂರನ್ನು ಬರೆಯಲು ಆಗುವುದಿಲ್ಲ ದೂರನ್ನು ಬರೆದುಕೊಡಿ ಎಂದು ಕೇಳಿಕೊಂಡಿರುತ್ತಾರೆ. ನಾನು ಚಾಸ 1 ರವರು ಹೇಳಿದಂತೆ ದೂರನ್ನು ಬರೆದಿರುತ್ತೇನೆ.

3. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ದೂರು ಆಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ1 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ1(ಬಿ) ಎಂದು ಗುರುತಿಸಲಾಯಿತು.

4. ದಿನಾಂಕಃ 29.05.2020 ರಂದು 12 ಗಂಟೆ ಸಮಯದಲ್ಲಿ ಪೊಲಿಸ್ ಅಧಿಕಾರಿಯವರು ಕರೆ ಮಾಡಿ ಚಾಸ 1 ರವರ ಮನೆಯ ಹತ್ತಿರ ಬರುವಂತೆ ತಿಳಿಸಿರುತ್ತಾರೆ. ನಾನು ಅಲ್ಲಿಗೆ ಹೋಗಿರುತ್ತೇನೆ. ಅಲ್ಲಿ ಉಮೇಶ್ (ಚಾಸ 1) ರವರು ಮನೆಗೆ ಬಂದಿರುತ್ತಾರೆ. ಸದರಿ ಸ್ಥಳದಲ್ಲಿ ನಾನು ಚಾಸ 1, ಚಾಸ 2 ಮತ್ತು ಪೋಲಿಸರು ಇದ್ದೆವು.

5. ನನಗೆ ಪೊಲಿಸರು ಗಲಾಟೆ ವಿಚಾರವಾಗಿ ಆದ ಸ್ಥಳದ ಮಹಜರ್ ಮಾಡಲು ಬಂದಿರುತ್ತಾರೆ ಎಂದು ತಿಳಿಸಿರುತ್ತಾರೆ. ಸದರಿ ಗಲಾಟೆ ಆದ ಜಾಗವನ್ನು ಚಾಸ 1 ರವರು ಪೊಲಿಸರಿಗೆ ತಿಳಿಸಿರುತ್ತಾರೆ. ಸದರಿ ಸ್ಥಳದ ಸರ್ವೆ ನಂ 83/4 ಮಸಗಲ್ಲಿ ಆಗಿರುತ್ತದೆ. ಸದರಿ ಸ್ಥಳದಲ್ಲಿ 12 ಗಂಟೆಯಿಂದ 1.30 ರವರೆಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ.

6. ಚಾಸ 1 ರವರು ಸ್ಥಳದಲ್ಲಿ ಬಿದ್ದಿದ್ದ ಹಲ್ಲೆಗೆ ಬಳಸಿದ ಎಂ.ಒ 1 ರಿಂದ 3 ಮುದ್ದೆ ಮಾಲುಗಳನ್ನು ತೋರಿಸಿ ಪೊಲಿಸರಿಗೆ ಎತ್ತಿಕೊಟ್ಟಿರುತ್ತಾರೆ. ಪೊಲಿಸರು ಅಲ್ಲಿ ಯಂತ್ರದಿಂದ ಬರವಣಿಗೆ ಮಾಡಿಕೊಂಡು ನನ್ನ ಸಹಿ ಪಡೆದಿರುತ್ತಾರೆ.

7. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಕೃತ್ಯ ನಡೆದ ಸ್ಥಳ ಪಂಚನಾಮೆ ಮತ್ತು ಅಮಾನತ್ತು ಪಂಚನಾಮೆಯಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ2 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು.

8. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಕೃತ್ಯ ನಡೆದ ಸ್ಥಳದ ಕಚ್ಚಾನಕ್ಷೆಯಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯನ್ನು ಈಗಾಗಲೇ ನಿಪಿ3 ಎಂದು ಗುರುತಿಸಲ್ಪಟ್ಟಿರುತ್ತದೆ, ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಾಕ್ಷಿ ಸಹಿಯನ್ನು ನಿಪಿ3(ಬಿ) ಎಂದು ಗುರುತಿಸಲಾಯಿತು.

9. ಸದರಿ ಪಂಚನಾಮೆ ಕಾಲಕ್ಕೆ ಘಟನಾ ಸ್ಥಳದಲ್ಲಿ ತೆಗೆದ ಎರಡು ಭಾವ ಚಿತ್ರಗಳಲ್ಲಿರುವ ತನ್ನ ಇರುವಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ನಿಪಿ4 ಎಂದು ಗುರುತಿಸ್ಪಟ್ಟಿರುತ್ತದೆ.

10. ನಾನು ದೂರನ್ನು ಬರೆದುಕೊಟ್ಟ ಬಗ್ಗೆ ಮತ್ತು ಪಂಚನಾಮೆಯಲ್ಲಿ ಭಾಗವಹಿಸಿದ ಬಗ್ಗೆ ಪೊಲಿಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಬಿ.ಎಸ್.ವಿ ರವರಿಂದಃ**

1. ನಾನು ಚಾಸ 1 ರವರ ಸಂಬಂಧಿಕರು ಎಂದು ಸೂಚಿಸಿದರೆ ಸರಿ. ನನಗೆ ಚಾಸ 1 ರವರು ನನ್ನ ಅತ್ತೆಯ ಮಗನಾಗಬೇಕು. ನಾನು ಮತ್ತು ಚಾಸ 1 ರವರು ಅನೋನ್ಯವಾಗಿರುತ್ತೇವೆ ಎಂದು ಸೂಚಿಸಿದರೆ ಸರಿ.

2. ಈ ಪ್ರಕರಣದ ಆದ ನಂತರ ಆರೋಪಿ 1 ರವರು ನಮ್ಮ ಜೋತೆ ಮಾತನಾಡುವುದಿಲ್ಲ. ಈ ಪ್ರಕರಣ ದಾಖಲಿಸಿದ ನಂತರ ನಾವು ಆರೋಪಿಗಳ ಮೇಲೆ ಅಟ್ರಾಸಿಟಿ ಪ್ರಕರಣವನ್ನು ದಿನಾಂಕಃ 30.08.2020 ರಂದು ದಾಖಲಿಸಿರುತ್ತೇವೆ ಎಂದು ಸೂಚಿಸಿದರೆ ಸರಿ. ಸದರಿ ಪ್ರಕರಣ ಈಗ ಚಾಲ್ತಿಯಲ್ಲಿ ಇರುತ್ತದೆ ಎಂದು ಸೂಚಿಸಿದರೆ ಸರಿ.

3. ಚಾಸ 1 ರವರು ಮನೆಯು ಸರ್ವೆ ನಂಬರ್ 83/4 ರಲ್ಲಿ ಇರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ನನ್ನ ಪ್ರಕಾರ ಸದರಿ ಮಹಜರ್ ಅನ್ನು ಉಮೇಶ್ (ಚಾಸ 1) ರವರ ಮನೆಯ ಪಕ್ಕದಲ್ಲಿ ಬರೆದಿರುತ್ತಾರೆ.

4. ಸರ್ವೆ ನಂ 83/4 ಆರೋಪಿ 5 ರವರ ಹೆಸರಿನಲ್ಲಿ ಇರುತ್ತದೆ. ನಾನು ಪಂಚನಾಮೆಯನ್ನು ಹೀಗೇ ಬರೆಯಬೇಕು ಎಂದು ಹೇಳಿ ಬರೆಸಿರುವುದಿಲ್ಲ. (ಈ ಹಂತದಲ್ಲಿ ಅಭಿಯೋಜಕರು ಅನಾವಶ್ಯಕವಾಗಿ ಸಾಕ್ಷಿಯ ಹೇಳಿಕೆ ದಾಖಲೆ ಮಾಡುವಾಗ ತೊಂದರೆ ಕೊಡುತ್ತಿರುವುದರಿಂದ ಮಾನ್ಯ ಎ.ಪಿ.ಪಿ ರವರಿಗೆ ಪ್ರಶ್ನೆಯು ಪೂರ್ತಿ ಮುಗಿದ ನಂತರ ಮತ್ತು ಪ್ರಶ್ನೆಯನ್ನು ಕೇಳಿದ ನಂತರ ತಮ್ಮ ತಕರಾರನ್ನು ಸಲ್ಲಿಸಬೇಕಾಗಿ ವಿನಂತಿಸಿಕೊಂಡಿರುತ್ತದೆ.) ಸದರಿ ಪ್ರಶ್ನೆಗೆ ಸಾಕ್ಷಿಯು ಯಾವುದೇ ಮುಂದುವರಿದ ಸ್ವ ಇಚ್ಚೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಆದ್ದರಿಂದ ಸಾಕ್ಷಿಯ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ. ನ್ಯಾಯಾಲಯವು ಕಾನೂನಿನ ದೃಷ್ಟಿಯಿಂದ ಏನಾದರೂ ಮುಂದೆ ಹೇಳುವುದು ಇದೇಯಾ ಎಂದು ಕೇಳಿದಾಗ ಸಾಕ್ಷಿಯು ಏನೂ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

5. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಅದೇ ದಿನ ಆರೋಪಿ 1 ರವರು ತನಗೆ ನಾನು ಚಾಸ 1 ರವರ ಹೆಂಡತಿ, ಚಾಸ 1 ರವರ ತಾಯಿ ಸಂಜೆ 6

ಗಂಟೆಗೆ ಹಲ್ಲೆ ಮಾಡಿರುತ್ತೇವೆ ಎಂದು ಮೊಖದಮ್ಮೆ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

6. ಚಾಸ 1 ರವರು ಆದಿನ ಮಾತನಾಡುವ ಸ್ಥಿತಿಯಲ್ಲಿ ಇದ್ದರು. ಆ ದಿನ ಚಾಸ 1 ರವರು ಮಾತನಾಡುವ ಸ್ಥಿತಿಯಲ್ಲಿ ಇದ್ದರೂ ಸಹ ನಾನು ದ್ವೇಶದಿಂದ ಆರೋಪಿಗಳ ವಿರುದ್ದ ಈ ಸುಳ್ಳು ದೂರನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

7. ಪಂಚನಾಮೆ ಕಾಲಕ್ಕೆ ನಮ್ಮ ಸಹಿಗಳನ್ನು ಚೀಟಿ ಮೇಲೆ ಪಡೆದುಕೊಂಡು ಎಂ.ಒ 1 ರಿಂದ 3 ರ ಮೇಲೆ ಅಂಟಿಸಿರುವುದಿಲ್ಲ. ನಾನು ಆ ದಿನ ಪಂಚನಾಮೆ ಮಾಡಲು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ನಾನು ಗಲಾಟೆ ಆದ ಸ್ಥಳದಲ್ಲಿ ಉಪಸ್ಥಿನನಿರುವುದಿಲ್ಲ, ನಾನು ಪಂಚನಾಮೆಯಲ್ಲಿ ಭಾಗವಹಿಸದೇ ಇದ್ದರೂ ಸಹ ಭಾಗವಹಿಸಿರುತ್ತೇನೆ ಮತ್ತು ಪಂಚನಾಮೆಯನ್ನು ನನ್ನ ಸಮಕ್ಷಮ ಜರುಗಿಸಿ ಎಂ.ಒ 1 ರಿಂದ 3 ಮು.ಮಾಲುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ಆರೋಪಿಗಳಿಗೂ, ನ್ಯಾಯಾಲಯದ ಮುಂದೆ ಇರುವ ಮು.ಮಾಲಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿಯು ಮೌನವಾಗಿ ನಿಂತಿರುತ್ತಾರೆ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.